express an unconditional regret. Since he has expressed regret, I have permitted him to sit in the House.

ಶ್ರೀ ವಾಟಾಳ್ ನಾಗರಾಜ್.—ನಾನು ಎದ್ದುನಿಂತರೆ ತಮಗೆ ಕೋಪ ಬರುತ್ತದೆ, ನಿಮ್ಮ ಬಗ್ಗೆ ನಾನಂತೂ ಕೋಪಮಾಡಿಕೊಳ್ಳುವುದಿಲ್ಲ. ಕೊನೆಯ ಬೆಂಚಿನಲ್ಲಿ ನಾನು ಕುಳಿತಿದ್ದೇನೆ, ನನಗೆ ನಪ್ಲಿಮೆಂಟರಿ ಕೇಳಬೇಕೆಂಬ ಉದ್ದೇಶವಿದೆ, ಜನರ ಪರವಾಗಿ ಬೇಕಾದ್ದನ್ನು ಕೇಳಬೇಕೆಂದು ನಾನು ಚುಯಿತನಾಗಿ ಈ ಸಭೆಗೆ ಬಂದಿದ್ದೇನೆ. ಮುಂದೆ ಶ್ರೀಯುತರುಗಳಾದ ಶಿವಪ್ಪನವರು, ಸಿದ್ದವೀರಪ್ಪನವರು, ಚನ್ನಬಸಪ್ಪನವರು ಮುಂತಾದವರಿದ್ದಾರೆ, ಅವರಿಗೆ ವಯಸ್ಸಾಗಿದೆ; ಬಹಳ ನಂತೋಷ. ತಮ್ಮಲ್ಲಿ ಒಂದುವಿನಂತಿ. ಮಾತೆತ್ತಿದ್ದರೆ ನಮ್ಮನ್ನು ಹೊರಕ್ಕೆ ಹಾಕುವುದಕ್ಕೆ ಬದಲಾಗಿ ನಮ್ಮಮೇಲೆ ವಿಶ್ವಾಸವಿಡಿ, ನಾವು ಪ್ರಶ್ನೆಕೇಳುವುದಕ್ಕೆ ಅವಕಾಶಕೊಡಿ. ಇಡೀ ದಿವಸದಲ್ಲಿ ಒಂದೇ ಒಂದು ನಪ್ಲಿಮೆಂಟರಿಗೆ ನನಗೆ ಅವಕಾಶ ಸಿಕ್ಕಲ್ಲ, ಬೇಕಾದಾಗ ಒಂದೆರಡು ಪ್ರಶ್ನೆ ಕೇಳಲು ದಯೆಯಿಟ್ಟು ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. SPEAKER.—The Hon. Member has not understood me properly. I wanted to give him permission to ask a supplementary after Mr. Siddaveerappa, but he has no patience. He should have waited. I do not make any distinction between Member and Member. The legitimate aspirations of all Members will always be considered.

Notice of Adjournment motion

re: Consideration of the Report of the Technical Committees

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಅರ್ಜೆಂಟ್ ವಿಷಯದ ಬಗ್ಗೆ ಅವಸರದ ನಿರ್ಣಯ ಕಳುಹಿಸಿದ್ದೆ. ಅದಕ್ಕೆ ತಾವು ಉತ್ತರ ಕಳಿಸಿದ್ದಿರಿ. ತಮ್ಮ ಕಾರ್ಯಾಲಯದಿಂದ ಏನು ಉತ್ತರ ಬಂದಿದೆ ಅದನ್ನು ಪುನರ್ಪರಿಶೀಲನೆ ಮಾಡಬೇಕು. ಅದಕ್ಕೆ ಕಾರಣವನ್ನು ಹೇಳುತ್ತೇನೆ.

Mr. SPEAKER.—I have understood the intention of the Hon. Member. He has raised something about the alleged report of the Technical Committee. That report of course is not before me. Hon. Member Sri H. M. Channabasappa has produced before me a document purporting to be a report. I was just considering whether there is such a report and secondly, even if there is such a report, whether it is a matter of such great importance as to displace the normal work of the House, namely the discussion of matters pertaining to Electricity Board. Hon. Members are aware that when demands and requests and suggestions came from all sides of the House a day had been provided for discussion of matters like rates, deposits, and several other things pertaining to Electricity Board. Therefore, I said that it is not a matter of such importance as to dislocate the normal business of the House.

The other motion, notice of which is given by Sri Channabasappa, is before me. I am just considering it.

ಶ್ರೀ ಎಚ್. ಎನ್. ನಂಜೇಗೌಡ.—ಯಾವುದಾದರೂ ಅವಸರದ ನಿರ್ಣಯ ಕೊಟ್ಟಾಗ ಅದು ಅವಸರವಾದಂತಹ ವಿಷಯವೋ ಅಲ್ಲವೊ ಎಂಬ ಬಗ್ಗೆ ನಮ್ಮನ್ನು ಕೇಳತಕ್ಕ ಸೌಹಾರ್ದತೆ ತಮ್ಮಲ್ಲಿ ಇರಬೇಕು. ಈ ಟೆಕ್ನಿಕರ್ ಕಮಿಟಿ ರಿಪೋರ್ಟ್ ಅಂತಹ ಅವಸರದ ವಿಷಯವಲ್ಲ ಎಂದು ತಾವು ಹೇಳುವುದಾದರೆ ಅದು ಆ ಕಮಿಟಿಯ ಮೇಲೆ ರಿಫ್ಲೆಕ್ಷನ್ ಆಗುತ್ತದೆ. ಆ ಕಮಿಟಿಯು ವರದಿ ಪತ್ರಿಕೆ

(ಶ್ರೀ ಎಚ್. ಎನ್. ನಂಜೇಗೌಡ)

ಗಳಲ್ಲಿ ಪ್ರಕಟವಾಗಿದೆ ಅದನ್ನು ಎಲ್ಲರೂ ನೋಡಿದ್ದಾರೆ. ಜೊತೆಗೆ ಅದು ಪತ್ರಿಕೆಗಳಲ್ಲಿ ಪ್ರಕಟವಾದ ನಂತರ ಮದ್ರಾಸ್ ಸರ್ಕಾರದ ಮಂತ್ರಿಗಳೂ ಕೂಡ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ನನ್ನ ಹತ್ತಿರ ಕೂಡ ಅದರ ಕಾಪಿ ಇದೆ. ಅದರಲ್ಲಿ ತಿಳಿಸಿರುವಂತೆ ಈ ರೀತಿ ಇದೆ :

" A study of available statistics from 1933 onwards reveals that at 75 per cent dependability, we can hardly find about 10 TMC available for new projects Upstream of K.R.S...."

10 ಟಿ.ಎಂ.ಸಿ.ಎಫ್.ಟಿ. ಕೆ.ಆರ್.ಎಸ್. ಮೇಲೆ ಇದೆ ಎಂದರೆ we are really sorry.

Mr. SPEAKER.—The Report is not before us.

ಶ್ರೀ ಎಚ್. ಎನ್. ನಂಜೇಗೌಡ.—ಇದು ಬಹಳ ಪ್ರಾಮುಖ್ಯವಾದ ವಿಷಯವಾಗುತ್ತದೆ. ಕಮಿಟಿಯವರು ಹೇಳಿರುವಕ್ಕ ವಿಷಯ ಮಾನ್ಯ ಮಂತ್ರಿಗಳು ಗಮನಕ್ಕೆ ತೆಗೆದುಕೊಂಡರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಒಂದು ವಿಚಾರ ವಿನಂತಿಸಿಕೊಳ್ಳುವುದಕ್ಕೆ ಅಪೇಕ್ಷಿಸುತ್ತೇನೆ. ಟೆಕ್ನಿಕರ್ ಕಮಿಟಿ ರಿಪೋರ್ಟ್ ಸರ್ಕಾರಕ್ಕೆ ಹೋಗಿದೆ ಎಂದು ಈಗತಾನೆ ತಿಳಿದುಬಂತು. ಸಾರ್ವಜನಿಕರ ತಿಳಿವಳಿಕೆ ಬಗ್ಗೆ ಅದನ್ನು ನಾವೇನೂ ಇಟ್ಟಿಲ್ಲ, ಸದಸ್ಯರ ಉಪಯೋಗಕ್ಕೂ ಕೂಡ ಒಂದು ಕಾಪಿಯನ್ನೂ ಒದಗಿಸಿಕೊಟ್ಟಿಲ್ಲ, ಹಾಗಿದ್ದಾಗ್ಯೂ ಮಾನ್ಯ ಸದಸ್ಯರು ಯಾವ ಒಂದು ರಿಪೋರ್ಟ್ ಕಾಪಿ ಬಂದಿದೆ ಎಂದು ಹೇಳುತ್ತಾರೆ ಅದು ಹೇಗೆ ಬಂತು ಅನ್ನುವುದು ನನಗೆ ತಿಳಿಯದು. ಅಂತಹ ಒಂದು ರಿಪೋರ್ಟಿನ ಬಗ್ಗೆ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಇಲ್ಲಿ ಉಲ್ಲೇಖಿಸದೇ ಇರುವುದು ಒಳ್ಳೆಯದು. ಬಾಕಿ ವಿಚಾರಗಳಿಗೆ ನಾನು ಆಕ್ಷೇಪ ತೆಗೆದುಕೊಳ್ಳುತ್ತಾ ಇಲ್ಲ.

ಶ್ರೀ ಎಚ್. ಎನ್. ನಂಜೇಗೌಡ.—ನಾನು ಎರಡು ಮೋಷನ್‌ಗಳನ್ನು ಕೊಟ್ಟಿದ್ದೆ ಅದು ಪಾರ್ಲಿಮೆಂಟರಿ ಮಿನಿಸ್ಟರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಈಗ ನಾನು ಹೇಳುತ್ತಾ ಇರುವುದು ಪತ್ರಿಕೆಯಲ್ಲಿ ಪ್ರಕಟವಾಗಿರತಕ್ಕ ರಿಪೋರ್ಟು. There is a report in the Press about the reported remarks of the Tamil Nadu Chief Minister on the utilisation of Cauvery waters. ಇದು ಬಹಳ ಗಹನವಾದ ವಿಷಯ. 1974ನೇ ಇಸವಿ ಬಹಳ ಹತ್ತಿರದಲ್ಲೇ ಇದೆ ಎಂಬ ಉದ್ದೇಶದಿಂದಲೇ ಇಂತಹ ಒಂದು ಕಮಿಟಿಯನ್ನು ಮಾಡಿ, ಅವರ ಒಂದು ರಿಪೋರ್ಟನ್ನು ಸಭೆಯ ಮುಂದೆ ಇಟ್ಟಿಲ್ಲ ಎಂದರೆ ಇದರ ಅರ್ಥ ನಮಗೆ ಆಗುವುದಿಲ್ಲ. ಇಂತಹ ಒಂದು ಅಗ್ರಿಮೆಂಟ್ ಪ್ರಕಾರ ನಮ್ಮ ನಿಲುವು ಏನು ಎಂಬುದನ್ನು ಈಗ ಇಲ್ಲಿ ಚರ್ಚೆ ಮಾಡಿ ಅರ್ಥ ಮಾಡಿಕೊಳ್ಳಬೇಕಾಗಿದೆ. It is for the Government to furnish copies of the Report. If they are prepared to take the whole House into confidence, I have no objection. Let the Government bring a resolution; we will endorse it.

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಈ ಸಭೆಗೆ ಅರ್ಜೆಂಟ್ ಮ್ಯಾಟರಾಫ್ ಪಬ್ಲಿಕ್ ಇಂಪಾರ್ಟೆನ್ಸ್ ಅನ್ನುವುದನ್ನು ನಿರ್ಧರಿಸುವುದಕ್ಕೆ ನಿಗದಿ ಮಾಡಿರತಕ್ಕ ಅಳತೆಗೋಲು ಏನೆಂಬುದನ್ನು ತಿಳಿಸಿದರೆ ನಮಗೆ ಅದರಂತೆ ಅನುಸರಿಸಿ ನಡೆಯುವುದಕ್ಕೆ ಸಹಾಯಕವಾಗುತ್ತದೆ.

Mr. SPEAKER.—I will hear Sri Channabasappa afterwards.

As regards the observation made by Sri Nanje Gowda that I do not attach importance to the Committee's Report, I have to point out that his comments are not correct. I never said that. Government appointed a Committee and the Committee has submitted a report. I have no disrespect for the Committee; I have no intention to show disrespect to the report of the Committee. Since I have disallowed it, matter relating to that motion cannot be raised. The hon. Member may know why I have disallowed his adjournment motion. I have not given any ruling on

the motion given by hon. Member Sri Channabasappa. In case I give permission to his adjournment motion, Then it will have to be taken up tomorrow or the day after. I have deliberately kept the matter open and I have not given any ruling on it ; I am just considering it. I wisn to hear both the sides on it and then give my ruling.

I could not admit Sri Nanje Gowda's motion as it involved the adjournment of the business scheduled for the day ; namely, discussion on the Financial Statement for 1969-70 of the Mysore State Electricity Board. Since the adjourment motion does not relate to urgent matter of public importance so as to displace the normal work, permission is refused.

ಶ್ರೀ ಎಚ್. ಎಂ. ಚನ್ನಬಸಪ್ಪ.—ಈ ರಿಪೋರ್ಟ್‌ನಲ್ಲಿ ಅಡಕವಾಗಿರತಕ್ಕ ವಿಷಯ ಎಷ್ಟು ಗಹನವಾದದ್ದು ಎಂಬುದು ಅಧ್ಯಕ್ಷರಿಗೂ ಗೊತ್ತಿದೆ. ಅದನ್ನು ಇಲ್ಲಿ ಚರ್ಚೆ ಮಾಡಿದ್ದರೆ ದೇಶಕ್ಕೆ ಎಷ್ಟು ಅನಾಹುತ ಆಗುತ್ತದೆಂಬುದೂ ಅವರಿಗೆ ವೇದ್ಯವಾಗಿದೆ. ಆದಾಗ್ಯೂ ಅಧ್ಯಕ್ಷರು ಇಂಥ ಒಂದು ವಿಚಾರ ಅರ್ಜೆಂಟ್ ಮ್ಯಾಟರ್ ಆಗುವುದಿಲ್ಲ, ಅದು ಅಂಥ ಒಂದು ಇಂಪಾರ್ಟೆಂಟ್ ವಿಷಯವಾಗುವುದಿಲ್ಲ, ಈ ವರವಿಯಲ್ಲಿ ಅಡಕವಾಗಿರತಕ್ಕ ವಿಷಯಗಳೇನಿವೆ ಅವು ಅಡ್ಜೆರ್ನ್‌ಮೆಂಟ್ ಮೋಷನ್ನಿನ ಚೌಕಟಿನಲ್ಲಿ ಬರುವುದಿಲ್ಲ ಎಂದು ಅಧ್ಯಕ್ಷರು ಒಮ್ಮೆ ಒಂದು ರೂಲಿಂಗನ್ನು ಕೊಟ್ಟರೆ ನಾವು ಇನ್ನು ಮುಂದೆ ಇಂಥ, ಅಂದರೆ ಕಾವೇರಿ ಜಲಾನಯನದಲ್ಲಿ ಪ್ರಾಜೆಕ್ಟುಗಳನ್ನು ನಿರ್ಮಿಸಬೇಕೆಂದು ಕೇಳತಕ್ಕ ಕೆಲವು ಕ್ಷುಲ್ಲಕ ವಿಚಾರಗಳನ್ನು ಈ ನಥಿಯ ಮುಂದೆ ತರುವುದಿಲ್ಲ. ಅಧ್ಯಕ್ಷರು ಇದರ ಬಗ್ಗೆ ಒಂದು ರೂಲಿಂಗನ್ನು ಕೊಟ್ಟರೆ ಅನುಕೂಲವಾಗುತ್ತದೆಂದು ಕೇಳಿಕೊಳ್ಳುತ್ತೇನೆ. ನಮಗೆ ಬುದ್ಧಿ ಭ್ರಮಣಿಯಾಗಿದೆಯೆಂದು ನನಗನ್ನಿಸುತ್ತಿದೆ. ನಿಮಗೆ ಯಾವುದು ಅರ್ಜೆಂಟು, ಯಾವುದು ಇಮಿಡಿಯೇಟ್ ಎಂಬುದು ನೀವೇ ಹೇಳಬೇಕು. ರೀಸೆಂಟ್ ಅಕ್ಯರನ್ಸ್ ಅಂದರೆ ಯಾವುದು ? ಯಾವುದನ್ನು ಅಡ್ಜರ್ನ್‌ಮೆಂಟು ಮೋಷನ್ನಿನಲ್ಲಿ ತರಬಹುದೆಂಬುದಕ್ಕೆ ಗೈಡ್ ಲೈನ್ಸ್ ತಮ್ಮಿಂದ ಅಪ್ಪಣೆಯಾಗಲಿ ಎಂದು ನಾನು ಕೇಳಬಯಸುತ್ತೇನೆ.

2·30 P.M.

Sri K. PUTTASWAMY.—However much I may not like to come in the way of the matter now being discussed, I would not like the House to be converted into a law class.

Sri H. M. CHANNABASAPPA.—I submit it is not the business of the Hon. Minister to educate either the Chair or me.

Sri K. PUTTASWAMY.—I have as much right as my hon. Friend has, to say what I feel.

Mr. SPEAKER.—Though I do not like to give a ruling on a hypothetical question of legal or procedural point, since the hon. member has raised it. I shall say a word or two. But that cannot be taken an exhaustive. What is urgent and what is not urgent, has to be decided on the facts of each case. After considering the facts of each case, the Chair is expected to come to the conclusion whether a subject is a definite matter of urgent public importance or not. It all depends upon what that matter is. Therefore, no rule can be laid down and I am sorry I cannot give a categorical answer to the question raised by the hon. Member. The second question raised is about the question of 'recent occurrence'. The question of recent occurrence is judged in relation to the occurrence of the particular incident and whether the

(MR. SPEAKER)

earliest opportunity is taken by the member or not. That is the test. I think these are matters on which a general discussion of the type suggested cannot be taken up now since the time of the House is important we have to transact the business before the House.

Sri H. M. CHANNABASAPPA.—I have submitted a motion under rule 146, raising a very important issue that the findings of the Technical Committee must be taken into consideration by this House. You are good enough to say that you are going through it. In this context, I would like to submit that no technical consideration should come in the way of permitting a discussion on such an important matter. The other day 53 members of this House sought permission to submit a motion under rule 146 on the same subject and you were good enough to rule that the matter was under consideration by some committee and it need not be taken into consideration. You ruled it out. I woule like to make one submission on behalf of the members of the Assembly here and on behalf of 1½ crore people in this State. The Technical Committee has made very vital and important remarks which touch the economy of the State and therefore, if the recommendations of the Technical Committee are not seized immediately by the Government and proceeded with, then the economy of the State will be in jeopardy. Therefore, I would appeal in the interest of equity and justice to the people of the State, to permit a discussion on the recommendations made by the Technical Committee. I am aware you have a ground to say that the Resources Committees Report also will come. But I may say that the report of the Resources Committee has nothing to do with the Technical Committee report because the Government did doubt the statements made by me in regard to non-availability of Cauvery waters for Mysore before the 1974 Agreement expires. In that context the Government appointed this committee to verify whether water is available or not. Now the technical Committee, if I may disclose to you, has made a categorical statement which I have submitted to you.

MR. SPEAKER.—Please do not disclose it at this stage.

Sri H. M. CHANNABASAPPA.—It is the public property. I was a member of that Committee. I may enlighten you on some point. It has been made clear that if immediate action is not taken-we have hardly 4½ years left—to take up projects costing Rs. 118 crores, the posterity will condemn us for our failure. They have further added that if 1924 Agreement is not scrapped and without reference to the Government of India if the Mysore Government does not proceed with the projects listed in the schedule, the State will lose its rightful share of Cauvery waters for all times to come. If this is not important to be discussed here what else could be more important than this ? Therefore, I appeal to you, not to treat this lightly, not to treat this as someting confidential or if the

Government were to advise that a discussion should not take place here, you are here to protect our rights. We have a right to discuss and we have a right to express our opinion and we have the right to safeguard the interest of the State. It is not Government alone that has the interest of the State but it casts on both sides. A duty is cast on us to safeguard the interest of the State. Please permit this motion. We want a full-dress discussion on the report. If it were to be one day or two days, probably it will not be much for discussion of such an important issue.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವಿಷಯದಲ್ಲಿ ಈಗಾಗಲೇ 53 ಸದಸ್ಯರು ರುಜು ಹಾಕಿ ಒಂದು ನಿರ್ಣಯವನ್ನು ಕೊಟ್ಟಿದ್ದಾರೆ. ತಾವು ಆ ದಿವಸ ಅಪ್ಪಣೆ ಕೊಡಿಸಿದಿರಿ, ಟೆಕ್ನಿಕಲ್ ಡೇಟಾ ರಿಪೋರ್ಟು ಬಂದಮೇಲೆ ಇದನ್ನು ಆಲೋಚನೆ ಮಾಡೋಣ ಎಂದು. ಎರಡನೇ ದಿವಸ ಪ್ರಸ್ತಾಪಿಸಿದಾಗ ನೀವು ಲೀಡರ್ ಜೊತೆಯಲ್ಲಿ, ಪಾರ್ಲಮೆಂಟರಿ ವ್ಯವಹಾರ ಸಚಿವರ ಜೊತೆಯಲ್ಲಿ ಮಾತನಾಡಿ ಎಂದು ಸಲಹೆ ಕೊಟ್ಟಿರಿ. ಅದರಂತೆ ಮಂತ್ರಿಯವರ ಜೊತೆಯಲ್ಲಿ ಮಾತನಾಡಿ, ಇದಕ್ಕೆ ಅವಕಾಶ ಕಲ್ಪಿಸಿಕೊಡುವುದು ಒಳ್ಳೆಯದು ಎಂದು ಹೇಳಿದಾಗ, ಅದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಆಲೋಚನೆ ಮಾಡೋಣ ಎಂದು ಅವರು ತಿಳಿಸಿದರು. ಈಗ ಚನ್ನಬಸಪ್ಪನವರು ಕೊಟ್ಟಿರತಕ್ಕಂತಹ ನಿರ್ಣಯವಾದರೂ ಸರಿ, ಅನುಮತಿ ಕೊಡಬೇಕು. ಹಿಂದೆ ನಡೆದಿರತಕ್ಕಂತಹ ಅನುಭವ ಈ ಸಭೆಯಲ್ಲಿ ಇದೆ. 1966ನೇ ಇಸವಿಯಲ್ಲಿ ನಿಮ್ಮ ಹಿಂದೆ ಇದ್ದಂತಹ ಸಭಾಧ್ಯಕ್ಷರಾದ ದಿವಂಗತ ಬಾಳಿಗಾರವರು ಅವಕಾಶ ಕೊಟ್ಟಂತಹ ಉದಾಹರಣೆಯನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ತಾವು ಈ ಒಂದು ವಾರದಲ್ಲಿ ಇದನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು ಅದನ್ನು ಇಂಥ ದಿವಸ ಚರ್ಚೆಗೆ ತೆಗೆದುಕೊಳ್ಳುತ್ತೇವೆಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನಮಾಡಿ, ಒಂದು ಅವಕಾಶವನ್ನು ಕಲ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಎನ್. ಎ. ಚನ್ನೇಗೌಡ.—ಸ್ವಾಮಿ, ಇವೊತ್ತಿನ ಪತ್ರಿಕೆಯಲ್ಲಿ ಮದ್ರಾಸಿನ ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಕರುಣಾನಿಧಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅದೇನೆಂದರೆ ಟೆಕ್ನಿಕರ್ ಡೇಟಾ ಕಮಿಟಿಯ ವಿಚಾರವಾಗಿ ಕರ್ನಾಟಕ ಎಕ್ಸ್‌ಪೆಸ್ ಮಾಡಿ ಹೇಮಾವತಿ ಅಣೆಕಟ್ಟನ್ನು ಕಟ್ಟುವುದಕ್ಕೆ ಅವರು ಎಲ್ಲಾ ವಿಧವಾದ ಎಷ್ಟೆಷ್ಟು ತೊಂದರೆಗಳು, ಅಡ್ಡಿ ತರಬೇಕು ಅದನ್ನು ಮಾಡುತ್ತೇವೆ, ಆ ಕಟ್ಟೆಯನ್ನು ಕಟ್ಟಿದರೆ ಮದ್ರಾಸಿಗೆ ತೊಂದರೆಯಾಗುತ್ತದೆ ಎಂದು ಮದ್ರಾಸಿನ ಮುಖ್ಯ ಮಂತ್ರಿಗಳಾದ ಶ್ರೀ ಕರುಣಾನಿಧಿಯವರು ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ. ನೆರೆ ಪ್ರಾಂತ್ಯಗಳವರೂ ಕೂಡ ನಮ್ಮ ಅಭಿವೃದ್ಧಿಗೆ ಅಡ್ಡಿ ಬರುತ್ತಾ ಇರುವಾಗ ನಮ್ಮ ಸರ್ಕಾರದವರು ಸೂಕ್ತವಾದ ಕ್ರಮವನ್ನು ತೆಗೆದುಕೊಂಡಿಲ್ಲ. ಟೆಕ್ನಿಕಲ್ ಡೇಟಾ ಕಮಿಟಿಯ ವರದಿ ಇನ್ನೂ ಬರಲಿಲ್ಲ ಎಂದು ಹೇಳುತ್ತಾರೆ. ಆದರೆ ಅದು ಪತ್ರಿಕೆಯಲ್ಲಿ ಪಬ್ಲಿಷ್ ಆಗಿದೆ. ಈ ಕಾವೇರಿ ನೀರನ್ನು ಉಪಯೋಗಮಾಡಿಕೊಳ್ಳುವ ಸಂಬಂಧದಲ್ಲಿ ಚರ್ಚೆ ಮಾಡಲು ಅವಕಾಶವನ್ನು ಕೊಡಬೇಕೆಂದು ಒಂದು ವಿಶೇಷ ನಿರ್ಣಯವನ್ನು ಈ ಸಭೆಯ ಮುಂದೆ ತಂದಾಗ ತಾವು ಇದಕ್ಕೆ ಅವಕಾಶವನ್ನು ಕೊಡದೇ ಇದ್ದರೆ ಹೇಗೆ ? ಒಂದೂವರೆ ಕೋಟಿ ಜನಗಳ ಆಶೋತ್ತರಗಳನ್ನು ಈಡೇರಿಸುವುದಕ್ಕೆ ಅಡ್ಡಿ ಬಂದರೆ ಇಡೀ ಜನತೆ ಈ ಸಭೆಗೆ ಶಾಪವನ್ನು ಹಾಕುತ್ತದೆ. ಆದ್ದರಿಂದ ತಾವು ದೊಡ್ಡ ಮನಸ್ಸು ಮಾಡಿ ಶ್ರೀಮಾನ್ ಚನ್ನಬಸಪ್ಪನವರು ಕಳುಹಿಸಿರತಕ್ಕ ನಿರ್ಣಯದ ಮೂಲಕ ಈ ವಿಷಯವನ್ನು ಸಂಪೂರ್ಣವಾಗಿ ಚರ್ಚೆ ಮಾಡಿ 1974ನೇ ಇಸವಿಯ ಒಳಗಾಗಿ ನಮಗೆ ಕಾವೇರಿ ನೀರಿನಲ್ಲಿ ಬರಬೇಕಾದ ನೀರಿನ ಭಾಗವನ್ನು ಉಪಯೋಗ ಮಾಡಿಕೊಳ್ಳಲು ಒಂದು ಅವಕಾಶವನ್ನು ಮಾಡಿ ಕೊಡಬೇಕೆಂದು ನಾನು ಏನಂತಿ ಮಾಡಿಕೊಳ್ಳುತ್ತೇನೆ.

† ಶ್ರೀ ಎಸ್. ಶಿವಪ್ಪ.—ಸ್ವಾಮಿ, ಕಾವೇರಿ ನದಿಯ ನೀರನ್ನು ಉಪಯೋಗಮಾಡಿಕೊಳ್ಳುವ ಸಂಬಂಧದಲ್ಲಿ ಟೆಕ್ನಿಕಲ್ ಡೇಟಾ ವಿಚಾರವಾಗಿ ಮತ್ತು ರಿಸೋರ್ಸಸ್ ವಿಚಾರವಾಗಿ ಈ ಸಭೆಯ ಸದಸ್ಯರನ್ನೊಳಗೊಂಡಂಥ ಎರಡು ಕಮಿಟಿಗಳನ್ನು ಮಾಡಿದ್ದೇವೆ, ಆದ್ದರಿಂದ ಆ ವಿಷಯವನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದು ಬೇಡಿ, ಅದನ್ನು ನಾವು ಇಲ್ಲಿ ಚರ್ಚೆ ಮಾಡಿದರೆ, ಅದರ ಅಂಕಿ ಅಂಶಗಳನ್ನು ಬೇರೆ ಸರ್ಕಾರದವರು ತೆಗೆದುಕೊಂಡು ನಮ್ಮಮೇಲೆ ಕೇಂದ್ರ ಸರ್ಕಾರದವರಿಗೆ ಅವರು ಬರೆಯುತ್ತಾರೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು. ಆದರೆ ನಮ್ಮ ಕಡೆಯ ಸದಸ್ಯರು ಆ ವಿಚಾರವನ್ನು ಚರ್ಚೆ ಮಾಡಬೇಕು ಎಂದು ಅಪೇಕ್ಷೆ ಮಾಡುತ್ತಾರೆ. ಇವೊತ್ತು ಆ

(ಶ್ರೀ ಎಸ್. ಶಿವಪ್ಪ)

ಬಗ್ಗೆ ಏನು ಮಾಡಬೇಕು, ಸರ್ಕಾರದವರು ಏನು ಮಾಡಿದ್ದಾರೆ, ಮತ್ತು ಸರ್ಕಾರದ ಅಭಿಪ್ರಾಯ ಏನು ಎಂದು ವಿಚಾರ ಮಾಡತಕ್ಕದ್ದು ಮುಖ್ಯ. ಟೆಕ್ನಿಕಲ್ ಡೇಟಾ ಕಮಿಟಿಯವರು, ಮತ್ತು ರೀಸೋರ್ಸಸ್ ಕಮಿಟಿಯವರು ಏನು ಮಾಡಿದ್ದಾರೆ, ಅವರು ಏನು ತೀರ್ಮಾನ ಮಾಡಿದ್ದಾರೆ; ಮುಂದೆ ಏನು ಮಾಡಬೇಕು ಎಂಬುದನ್ನು ಈ ಸಭೆಯವರು ಚರ್ಚೆ ಮಾಡಬೇಕಾದಂತಹ ವಿಷಯ. ನಮಗೆ ಮುಖ್ಯವಾಗಿ ಬೇಕಾಗಿರತಕ್ಕದ್ದು ಟೆಕ್ನಿಕಲ್ ಡೇಟಾ ಕಮಿಟಿ, ಮತ್ತು ರಿಸೋರ್ಸಸ್ ಕಮಿಟಿಯವರು ಈ ವಿಷಯವನ್ನು ಚರ್ಚೆ ಮಾಡಿ ಯಾವರೀತಿ ಈ ಪ್ರಾಜೆಕ್ಟನ್ನು ಮುಂದುವರಿಸಬೇಕು, ಮತ್ತು ಆದಕ್ಕೆ ಹಣವನ್ನು ಎಲ್ಲಿಂದ ತರಬೇಕು ಎಂದು ಏನು ಒಂದು ವರದಿ ಕೊಟ್ಟಿದ್ದಾರೆ, ಅದನ್ನು ಈ ಸಭೆಯಲ್ಲಿ ಬಹಿರಂಗವಾಗಿ ನಿರ್ಣಯದ ಮುಖಾಂತರ ಚರ್ಚೆ ಮಾಡಬೇಕು. ಆದ್ದರಿಂದ ಮಾನ್ಯ ಸಭಾ ನಾಯಕರು ಎಲ್ಲರನ್ನೂ ಕರೆಸಿ ಈ ಬಗ್ಗೆ ಸಮಾಲೋಚನೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕು ಎಂದು ನಾನು ಹೇಳುತ್ತೇನೆ.

† ಶ್ರೀ ಎಚ್. ಬಿ. ಪ್ಯಾಲನಯ್ಯ.—ಸ್ವಾಮಿ, ಅಂಕಿಅಂಶಗಳನ್ನು ಈ ವಿಚಾರದಲ್ಲಿ ಸಭೆಗೆ ಕೊಟ್ಟರೆ ಮದ್ರಾಸ್ ಸರ್ಕಾರ ಜಾಗೃತವಾಗುತ್ತದೆ ಎಂದು ನಮ್ಮ ಸರ್ಕಾರದವರು ಹೇಳುವುದರಲ್ಲಿ ಯಾವ ಹುರುಳೂ ಇಲ್ಲ. ಕಾವೇರಿ ಬೇಸಿನ್‌ನಲ್ಲಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳಬಹುದು ಎಂಬ ಬಗ್ಗೆ ಅಂಕಿಅಂಶಗಳು ನಮಗೂ ಗೊತ್ತಿದೆ ಮತ್ತು ಮದ್ರಾಸ್ ಸರ್ಕಾರಕ್ಕೂ ಗೊತ್ತಿದೆ. ಈಗಾಗಲೇ ಕೃಷ್ಣಾ ನದಿಯ ನೀರಿನ ಹಂಚಿಕೆಯ ಬಗ್ಗೆ ವಿವಾದ ಎದ್ದಿದೆ. ಇವತ್ತು ಮದ್ರಾಸ್ ಸರ್ಕಾರದ ಮುಖ್ಯಮಂತ್ರಿಗಳಾದ ಶ್ರೀ ಕರುಣಾನಿಧಿಯವರು ಕೊಟ್ಟಿರುವ ಹೇಳಿಕೆಯನ್ನು ನೋಡಿದರೆ ಮತ್ತು ಅವರು ಆ ರೀತಿಯ ಮಾರ್ಗವನ್ನು ಅನುಸರಿಸಿದರೆ ಇನ್ನು 50 ವರ್ಷಗಳಾದರೂ ಕೂಡ ಕೇಂದ್ರ ಸರ್ಕಾರದವರು ನಮಗೆ ಅನುಕೂಲವಾದ ಪರಿಹಾರವನ್ನು ಮಾಡುತ್ತಾರೆ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಇಡೀ ದೇಶಕ್ಕೆ ಸಂಬಂಧಪಟ್ಟ ವಿಚಾರವಾಗಿದೆ. ಸರಿಯಾದ ಅಂಕಿಅಂಶಗಳನ್ನು ಈ ವಿಚಾರದಲ್ಲಿ ಸಂಗ್ರಹಿಸಲು ನಮ್ಮ ಸರ್ಕಾರ ಅಸಮರ್ಥವಾಗಿದ್ದರೂ ಕೂಡ ಆಂಧ್ರ ಮತ್ತು ಮದ್ರಾಸ್ ಸರ್ಕಾರದವರು ಸಾಕಷ್ಟು ಅಂಕಿಅಂಶಗಳನ್ನು ಸಂಗ್ರಹ ಮಾಡಿ ಇಟ್ಟು ಕೊಂಡಿದ್ದಾರೆ. ಅಂಕಿಅಂಶಗಳನ್ನು ನಮ್ಮ ಸರ್ಕಾರದವರು ಮುಚ್ಚುಮರೆ ಮಾಡುವ ವಿಷಯವೇ ಇಲ್ಲಿ ಬರುವುದಿಲ್ಲ. ಈ ಬಗ್ಗೆ ಚರ್ಚೆಮಾಡಲು ನಾವು 50 ಜನರು ಸಹಿ ಮಾಡಿ ತಮಗೆ ಕೊಟ್ಟಿದ್ದೇವೆ. ಮತ್ತು ವಿಷಯವನ್ನು ಈಗಾಗಲೇ ಮಾನ್ಯ ಚೆನ್ನಬಸಪ್ಪನವರು ಎತ್ತಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಷಯವಾದ್ದರಿಂದ, ಈಗ ಸಭೆಯ ಮುಂದೆ ಇರುವ ಬೇರೆ ವಿಷಯಗಳನ್ನು ಬದಿಗಿಟ್ಟು ಈ ಪ್ರಾಮುಖ್ಯವಾದ ವಿಷಯವನ್ನು ತೆಗೆದುಕೊಳ್ಳುವುದು ಒಳ್ಳೆಯದು. ಈ ರಾಜ್ಯದ ಒಳ್ಳೆಯ ಮತ್ತು ಕೆಟ್ಟದ್ದರ ಮೇಲೆ ಈ ಪ್ರಶ್ನೆ ಇರುವುದರಿಂದ ತಾವು ಎರಡು ದಿವಸ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಹೇಮಾವತಿ ಮತ್ತು ಕಾವೇರಿ ಬೇಸಿನ್‌ನಲ್ಲಿರುವ ಯಾವ ಯಾವ ಯೋಜನೆಗಳು ಬರುತ್ತವೆ ಎಂಬುದು ದೇಶದ ಜನರಿಗೆ ಸಾಕಷ್ಟು ಗೊತ್ತಿಲ್ಲ. ಈ ಬಗ್ಗೆ ನಾವುಗಳು ಚರ್ಚೆ ಮಾಡುವುದರಿಂದ ಯಾವ ರಹಸ್ಯವನ್ನೂ ಸಹ ಬೇರೆ ರಾಜ್ಯದವರಿಗೆ ಬಿಟ್ಟುಕೊಟ್ಟಂತಾಗುವುದಿಲ್ಲ. ಸರ್ಕಾರದ ಕೈಯನ್ನು ಬಲಪಡಿಸುವುದಕ್ಕಾಗಿ ನಾವು ಕೆಲವು ವಿಚಾರಗಳನ್ನು ಈ ಬಗ್ಗೆ ಚರ್ಚೆ ಮಾಡಬೇಕೆಂದಿದ್ದೇವೆ. ಇದು ರಾಜ್ಯದ ಪ್ರತಿಯೊಬ್ಬ ಪ್ರಜೆಗೂ ಸಂಬಂಧಪಟ್ಟ ವಿಚಾರವಾಗಿದೆ. ನಮ್ಮ ಅಭಿಪ್ರಾಯಗಳನ್ನು ಈ ಮೂಲಕ ಕೇಂದ್ರ ಸರ್ಕಾರದ ಗಮನಕ್ಕೆ ತರಬೇಕಾಗಿದೆ. ನಮಗೆ ಇದು ಒಂದೇ ಮಾರ್ಗ ಇರುವುದು. ನಾವು ಚರ್ಚೆ ಮಾಡದಿದ್ದರೆ ಇದು ಕೇವಲ ಮುನುಕ ನೊಳಗಿನ ಗುದ್ದು ಆದೀತು ಎಂದು ಹೇಳುತ್ತೇನೆ. ಈಗಲೇ ನಾವು ಕ್ರಮ ತೆಗೆದುಕೊಳ್ಳದಿದ್ದರೆ ದೇಶದ ಆರ್ಥಿಕ ಪ್ರಗತಿ ಮತ್ತು ದೇಶದ ಆರ್ಥಿಕ ರಚನೆ ಕೆಟ್ಟು ಹೋಗುತ್ತದೆ ಎಂದು ಹೇಳ ಬಯಸುತ್ತೇನೆ.

Sri H. N. NANJE GOWDA.—Sir, this House is eager to know what the recommendations of the Technical Committee are and what action Government would take to implement those recommendations. If the recommendations reveal that Government must act immediately to safeguard our interest, we want an assurance to that effect. ಏಕೆಂದರೆ ತಮಗೆ ಏನಾದರೂ ಒಂದು ನೋಟೀಸ್ ಕೊಟ್ಟರೆ ತಮ್ಮ ಸೆಕ್ರೆಟೇರಿಯಟ್‌ನ ಅಧಿಕಾರಿಗಳು ಏನೋ ಒಂದು ಉತ್ತರ ಕೊಟ್ಟುಬಿಡುತ್ತಾರೆ.

Mr. SPEAKER.—It is my decision that the Secretariat has conveyed to the hon. Member.

Sri H. N. NANJE GOWDA.—This has become necessary because this House is eager to know the recommendations of the Committee. The reported remarks of the Madras Chief Minister has given room for suspicion that our rights in the Cauvery Basin are in danger. ಸೆಕ್ಷನ್ 312ರ ಪ್ರಕಾರ ನಮ್ಮ ನೋಟೀಸನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ. ಮಾನ್ಯ ಜ್ಯಾಲನಯ್ಯನವರು ಹೇಳಿರುವಂತೆ ನಾವು ಮೀನಾಮೇಷ ಎಣಿಸಿಕೊಂಡು ಕುಳಿತುಕೊಂಡಿರುವುದಕ್ಕಾಗುವುದಿಲ್ಲ. ನಮಗೆ ಗಾಬರಿಯಾಗಿದೆ. ಸರ್ಕಾರದವರು ಖಚಿತವಾಗಿ ತಿಳಿಸುವವರೆಗೂ ನಾವು ಸುಮ್ಮನಿರುವುದಕ್ಕಾಗುವುದಿಲ್ಲ.

3-00 P M.

ಸರಕಾರಕ್ಕೆ ನಮ್ಮ ಆತುರ ಇಲ್ಲಿ ತೋರಿಸಬೇ ಬೇಕಾಗಿದೆ. ಸರಕಾರ ಇದರ ಬಗ್ಗೆ ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳದಿದ್ದರೆ ಹಳೆಯ ಮೈಸೂರಿನಲ್ಲಿ ಬಾಸ ಮಾಡಶಕ್ಕ ಜನಕ್ಕೆ ಅಪನಂಬಿಕೆ ಬರಲು ಅವಕಾಶವಾಗುತ್ತದೆ. ಕರ್ನಾಟಕ ವಿಶಾಲವಾಗುದರಿಂದ ನಮ್ಮ ಹಕ್ಕು ಹೋಯಿತು ಮತ್ತು ಇದು ಇಲ್ಲದ ಸಲ್ಲದ ತೊಂದರೆಗಳಿಗೆ ಅವಕಾಶವಾಗುತ್ತದೆ. ಆದುದರಿಂದ ಇದರ ಬಗ್ಗೆ ಸರಕಾರದ ಖಚಿತವಾದ ಹಾಗೂ ಸ್ಪಷ್ಟವಾದ ನಿಲುವು ಏನು ಎನ್ನುವುದನ್ನು ಇಲ್ಲಿ ಕೇಳಲು ಅಪೇಕ್ಷೆ ಪಡುತ್ತೇನೆ. 1974 ನೇ ಇಸವಿಯೊಳಗೆ ನಮ್ಮ ಹಕ್ಕು ಏನಿದೆ ಅದು ಸಂಪೂರ್ಣವಾಗಿ ಹೋಗುತ್ತದೆ. ಇದರ ಬಗ್ಗೆ ಬೇಗನೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಇದರ ಕಛೇರಿಯವರು ಏನು ಶಿಫಾರಸುಗಳನ್ನು ಮಾಡಿದ್ದಾರೆ ಅವನ್ನು ತಿಳಿಯಲು ಅಪೇಕ್ಷೆ ಪಡುತ್ತೇನೆ ಮತ್ತು ಇದರ ಬಗ್ಗೆ ತಾವು ಇಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸೂಚನೆ ಮಾಡಬಯಸುತ್ತೇನೆ.

Mr. SPEAKER.—There are two points before me. I have already made it known to hon. members that I am second to none in recognising the importance of the utilization of Cauvery waters. The matters relating to irrigation in the State deserve highest priority. There is no dispute about that. The notice of motion given by the hon. member Sri Channabasappa is accompanied by a document which purports to be a report. I do not know whether the report is published by the Government or whether it is made available by Government to the hon. Member. The document produced by the hon. member Sri Channabasappa came to may hands only after I came here.

Sri H. M. CHANNABASAPPA.—I had submitted it on the 29th.

Mr. SPEAKER.—Possibly it was given after we closed the meeting on Friday. The document came to my hands only today and I did not have enongh time to go through that document. I am not in a hurry to give a ruling either accepting or rejecting the motion. Suppose, I agree to give my consent, then time will have to be found under rules 149 and 150. These are matters which should be considered through the usual channels between the parties. I am sorry the usual channels between parties are not functioning. Let them come together and find a way out. Then I do not know whether the document produced is authorized copy of the report. The report of the Committee which is the authorized version is not before me. Let the report be first published.

Sri H. B. JWALANAIAH.—By that time much water would have flown.

Mr. SPEAKER. We must have an authorized version of the report of the Committee. Even if the motion is admitted some time will have to be found for discussion. We are scheduled to close the session on the 5th. If time is to be found for discussion of this motion, then the session may have to be extended. I would request that instead of creating an embarrassing situation for the Chair, it would be better to exhaust normal channel between parties and arrive at an agreed solution and find out time for discussion if discussion is agreed to.

Sri S. SIVAPPA.—The Technical Data Committee's Report is in the hands of the Tamil Nadu Chief Minister and he is commenting on that and yet this House is not given a copy of it.

Mr. SPEAKER.—I would like to know from the Hon. Minister for Parliamentary Affairs what is the position, whether the report is published and whether it will be possible to place the report before the House for discussion.

Sri K. PUTTASWAMY.—I am sorry an embarrassing situation is being created on the floor of the House. I learn that the Technical Data Committee has submitted its report, but Government have not had any time to look into the report.

Sri S. SIVAPPA.—How did Mr. Karunanidhi get it ?

Sri K. PUTTASWAMY.—Attempts are being made to have the report discussed. I may tell the House that Government are not prepared to have the report of the Technical Data Committee discussed on the floor of this House.

As regards the other question, the Leader of the Opposition just now said that a copy of the report is in the hands of the Chief Minister of Tamil Nadu. I do not think it is a fact. I can give an assurance to this House that no copy of the report from Government has gone to any other hands either officially or unofficially.

Sri H. M. CHANNABASAPPA.—The statement of the Hon. Minister for Parliamentary Affairs is surprising. It looks as though they are not in possession of the Committee's reports, but I may submit that the Chairman of that Committee is Mr. Lakkappa, Minister for Public Works.

Sri K. PUTTASWAMY.—I never said that the Report is not received by Government.

Sri H. M. CHANNABASAPPA.—If Government are in possession of the report and if it is the decision of the Cabinet that they do not want this House to discuss the recommendations of that Committee....

Sri K. PUTTASWAMY.—At this stage.

Sri H. M. CHANNABASAPPA.—You did not say 'at this stage'. He said Government are not prepared to discuss the recommendations of the Committee in the House. That is a reflection on the Committee appointed by this House. It is a question of privilege. Government appointed the Committee to go into the question, examine the whole

aspect and report, on the persuasion of all the members of this House. It was on the persuasion of the members of this House that it was decided that this course of action should be taken. Now Sri Puttaswamy tells this House that they are not prepared to allow this House to discuss this report. I would like to submit that this is a vital question which has got to be discussed on the floor of this House. No other House has the competency to discuss the question with better sense and better authority. If Government do not allow this question to be discussed in this House, I am afraid they will have the face the consequences.

Sri K. PUTTASWAMY.—I do not want to go through the arguments advanced by the hon. Member Sri Channabasappa time and again. The hon. Member has missed one point. This is not a Committee appointed by this House. If this House had appointed that Committee then its report ought to have been submitted to it and then the usual procedure would have taken place. This is a Committee appointed by Government.

Sri H. M. CHANNABASAPPA.—He should not misquote or misinterpret me. I said it is on account of the persuasions of the members of this House on both sides that this House decided that this matter should be discussed in a smaller body and accordingly a smaller body consisting of the Chief Minister and other Ministers met and it discussed this issue. I did not say that this House appointed this Committee. Whatever that may be, this report has to be discussed in this House; otherwise the Government would be at fault.

Sri K. PUTTASWAMY.—I was telling the House that Government have not had any time to look into the report. Before studying the report I cannot commit myself for a discussion on the basis of the report in this House.

Mr. SPEAKER.—I have heard both Sides. I am not in a hurry to give my Ruling. I shall go through the documents.....

Sri H. M. CHANNABASAPPA.—Sir, now that we know the mind of the Government that they are not prepared for a discussion, I appeal to you, Sir—you are the Custodian of our rights, and we have a right to discuss this question, particularly because Mysore can no longer be silent as we may lose the share of water for all times to make a provision to discuss it in this House.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೇವಲ 4 ದಿವಸ ಉಳಿದಿವೆ. ಅದರಲ್ಲಿ ಅವಕಾಶ ಮಾಡಿಕೊಡಬೇಕು.

Mr. SPEAKER.—I shall try to bring the two Sides together.

ಶ್ರೀ ಎಚ್. ಬಿ. ಜ್ಞಾನಯ್ಯ.—ನಾಲ್ಕು ದಿವಸ ಮಾತ್ರ ಉಳಿದಿರುವುದರಿಂದ ನಮ್ಮ ಕುತೂಹಲ ಹೆಚ್ಚಾಗಿದೆ.

Sri S. SIVAPPA.—This vague talk will not take us anywhere. You must try to see that both sides meet today alone by 4O' Clock and take a decision.

Mr. SPEAKER.—It is a very good suggestion. I shall try to bring the two sides together in the course of the day.

ಶ್ರೀ ಎಚ್. ಸಿದ್ದವೀರಪ್ಪ.—ಒಂದು ವಿಷಯವನ್ನು ಗಮನಕ್ಕೆ ತರಬೇಕಾಗಿದೆ. ಇದು ಬಹಳ ಬೇಜಾರಿನ ವಿಷಯವಾಗಿದೆ. ಕಾವೇರಿ ನೀರಿನ ವಿಚಾರವನ್ನು ದಿನವೂ ಹೇಳುತ್ತಿದ್ದಾರೆ, ಸರಕಾರದವರು ಈ ವಿಚಾರದಲ್ಲಿ ಯೋಚನೆಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ ನನಗಾದರೂ ಅನ್ನಿಸುವುದು ಇದನ್ನು ಆದಷ್ಟು ಜಾಗ್ರತೆ ಬಗೆಹರಿಸಬೇಕು, ಇಲ್ಲದಿದ್ದರೆ ಚೆನ್ನಾಗಿರುವುದಿಲ್ಲ. ಶ್ರೀ ಚನ್ನಬಸಪ್ಪನವರು ಬಹಳ ಕಳಕಳಿಯಿಂದ ಹೇಳುತ್ತಿದ್ದಾರೆ. ಇದನ್ನು 1974ರೊಳಗಾಗಿ ಬಗೆಹರಿಸದಿದ್ದರೆ ಶತಮಾನವಾದರೂ ಪರಿಹಾರವಾಗುವುದಿಲ್ಲ ತೊಂದರೆಯಾಗುತ್ತದೆ ಎಂದು ಹೇಳುತ್ತಿದ್ದಾರೆ, ಶ್ರೀ ಪುಟ್ಟಸ್ವಾಮಿಯವರೂ ಕೂಡ ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟವರು, ನಾವು ಕಾವೇರಿ ಬೇಸಿನ್ನಿನಲ್ಲಿಲ್ಲ. ಕಾವೇರಿ ಬೇಸಿನ್‌ಗೆ ಸಂಬಂಧಪಟ್ಟಂತೆ ಮೂರು ಜನ ಮಂತ್ರಿಗಳಿದ್ದರೂ ಕೂಡ ಅವರು ಕಲ್ಲಿನಂತೆ ಕುಳಿತಿದ್ದಾರೆ. ಅವರ ತಲೆಗೆ ಹತ್ತಿಲ್ಲವೋ ಅಥವ ಇನ್ನೇನೋ, ನಿಜಾಂಶ ಗೊತ್ತಿಲ್ಲ. ನಾವು ಕೃಷ್ಣಾ ಬೇಸಿನ್ನಿನಲ್ಲಿದ್ದೇವೆ. ಅದನ್ನು ನಾವು ನೋಡಿಕೊಳ್ಳುತ್ತೇವೆ. ಕಾವೇರಿ ಬೇಸಿನ್ನಿನಲ್ಲಿರುವವರಿಗೆ ತೊಂದರೆಯಾಗಿದ್ದರೆ ಅದನ್ನು ಯೋಚನೆಮಾಡಬೇಕು. ಇದುವರಗೆಗೆ ಮಾಡಿಲ್ಲವೋ ಎಂದು ಆಶ್ಚರ್ಯವಾಗುತ್ತಿದೆ. ಆದುದರಿಂದ ಸರಕಾರ ಕೂಡಲೇ ಇದನ್ನು ಯೋಚಿಸಿ ತಕ್ಕ ಕ್ರಮ ತೆಗೆದುಕೊಳ್ಳಬೇಕು. ಸುಮ್ಮನೆ ಇದ್ದೇ ರೀತಿ ಇದ್ದರೆ ಮುಂದೆ ತೊಂದರೆಬರುವುದು. ಆದುದರಿಂದ ಸರಿಯಾಗಿ ಈ ವಿಚಾರವನ್ನು ಪರಿಶೀಲಿಸಿ ಕೂಡಲೆ ಸೂಕ್ತ ಕ್ರಮ ಕೈಕೊಳ್ಳಬೇಕು.

Sri V. N. PATIL.—Sir, on a point of explanation.

Mr. SPEAKER.—The hon. Member may state his point in two minutes.

Sri. V. N. PATIL.—Why should there be restriction of time?

Mr. SPEAKER.—The business of the House is more important. Has the hon. Member given notice about it?

Sri V. N. PATIL.—Am I to give notice for everything?

Mr. SPEAKER.—Hon. Member should be brief.

Sri V. N. PATIL.—The point which I am going to raise pertains to fundamental human dignity. I had given notice of a Question 10 month's ago, but only today fortunately, I could get a reply. Four persons with axe injuries went to Humnabad hospital.....

Mr. SPEAKER.—Hon. Member is referring to a matter which has already been decided. I cannot permit it. If the hon. Member likes he can raise half-an-hour discussion.

Sri V. N. PATIL.—You allowed me hardly two supplementaries.

Mr. SPEAKER.—The hon. Member may please resume his seat.

Sri V. N. PATIL.—Sir, I have not received the correct answer, and you are not allowing me to raise the issue.

* * * * * *

ಶ್ರೀ ಎನ್. ಎ. ಚನ್ನೇಗೌಡ.—ಐದನೇ ಫೈನಾನ್ಸ್ ಕಮೀಷನ್ ವರದಿ ಪೇಪರ್‌ನಲ್ಲಿ ಬಂದ ಮೇಲೆ ರಾಜ್ಯಕ್ಕೆ ತುಂಬಾ ಅನ್ಯಾಯವಾಗಿದೆ ಎಂಬ ವಿಷಯವನ್ನು ಇಂಡಿಯಾ ಸರ್ಕಾರದವರ ಗಮನಕ್ಕೆ ತರಲು ಮಾನ್ಯ ಮುಖ್ಯ ಮಂತ್ರಿಗಳು ಡೆಲ್ಲಿಗೆ ಹೋಗಿದ್ದರು. ಆದರ ಬಗ್ಗೆ ಅವರ ಸ್ಟೇಟ್ ಮೆಂಟ್ ಕೊಡುತ್ತಾರೆಯೇ ಎಂದು ಕೇಳುತ್ತೇನೆ.

Mr. SPEAKER.—Government will take note of this.

---

* * Matter not recorded as ordered by the Chair